(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ: ಅಧ್ಯಕ್ಷರೆ, ನಾವೇನು ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಬಂದಿಲ್ಲ, ನಮ್ಮನ್ನು ಕೂಡ ಲಕ್ಷಾಂತರ, ಕೋಟ್ಯಾಂತರ ಜನರು ಆರಿಸಿ ಕಳುಹಿಸಿದ್ದಾರೆ, ನಮ್ಮ ಜವಾಬ್ದಾರಿ ನಮಗೂ ಗೊತ್ತಿದೆ, ಅವರಿಂದ ನಾವು ಕಲಿಯಬೇಕಾಗಿಲ್ಲ, ದಯವಿಟ್ಟು, ಸದನವನ್ನು ಸರಿಯಾದ ರೀತಿಯಲ್ಲಿ ನಡೆಸಿ...

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಹೊರಗಡೆ ಸುಳ್ಳು ಆರೋಪ ಮಾಡಿ, ಇಲ್ಲಿ ಸದನ ನಡೆಸುವುದಕ್ಕೆ ಅವಕಾಶ ಕೊಡದಿರುವುದು ಅತ್ಯಂತ ಬೇಜವಾಬ್ದಾರಿ ನಡವಳಿಕೆ.

(ಗೊಂದಲ)

ಅಧ್ಯಕ್ಷರು: ಈಗ ಬೇರೆಯವರ ಹೆಸರು ಬೇಡ, ಅದು ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ: ಸೋನಿಯಾ ಗಾಂಧಿಯವರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ನೈತಿಕ ಹಕ್ಕೇನಿದೆ?

(ಗೊಂದಲ)

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಹೊರತುಪಡಿಸಿ ಕಾಂಗ್ರೆಸ್ಸಿನ ಎಲ್ಲಾ ಸದಸ್ಯರು ಸದನದ ಬಾವಿಗೆ ಬಂದರು)

ಶ್ರೀ ಸಿದ್ದರಾಮಯ್ಯ: No, this is very bad. ಸಭಾನಾಯಕರಿದ್ದಾರೆ, ಅಧ್ಯಕ್ಷರೆ, ನಿಮ್ಮ ಚೇರಿಗೆ ಗೌರವವಿಲ್ಲವೆಂದರೆ ಹೇಗೆ? ಪದೇ ಪದೇ ಅವರು (ಆಡಳಿತ ಪಕ್ಷದ ಸದಸ್ಯರು) ನಿಂತರೆ, ನೀವು ಅದಕ್ಕೆ ಅಲೊ ಮಾಡಿದರೆ ಅಸೆಂಬ್ಲಿ ಏತಕ್ಕೆ ಇರಬೇಕು ಹೇಳಿ? ಉದ್ದೇಶ ಪೂರ್ವಕವಾಗಿ ಇಲ್ಲಿ ಇವರು ಏನು ಪ್ರಸ್ತಾಪ ಮಾಡಬಾರದೆಂದು, ಇವರ ಬಣ್ಣ ಬಯಲಾಗುತ್ತದೆ, ಈ ರಾಜ್ಯದ ಜನರಿಗೆ ಗೊತ್ತಾಗುತ್ತದೆ, ಇವರ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಕೋಟಿಗಟ್ಟಲೆ ಹಣ ಮಾಡಿರುವುದು ಜನರಿಗೆ ಗೊತ್ತಾಗುತ್ತದೆಂದು ಈ ರೀತಿ ಎದ್ದು ನಿಂತು ಮಾತನಾಡುತ್ತಿದ್ದಾರೆ, ಮುಖ್ಯಮಂತ್ರಿಗಳು ಇಲ್ಲಿ ಕುಳಿತುಕೊಂಡು ಈ ರೀತಿ

ನಡೆಸುತ್ತಿದ್ದಾರೆ, ನೀವು ಅವರಿಗೆ ಈ ರೀತಿ ಅವಕಾಶ ಮಾಡಿಕೊಟ್ಟರೆ, ಇವರಿಗೆ ಸದನ ನಡೆಸುವುದಕ್ಕೆ ಇಷ್ಟವಿದೆಯಾ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿಶ್ವನಾಥ್‌ರವರೇ, ಕುಳಿತುಕೊಳ್ಳಿ. ಅವರು ಕುಳಿತುಕೊಂಡಿದ್ದಾರೆ. ತಾವು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

(ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಶಾಸಕಾಂಗ ಪಕ್ಷದ ಶಾಸಕರು ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸಾದರು).

ಶ್ರೀ ಸಿದ್ದರಾಮಯ್ಯ: ನಾವು ಅವರ ತರಹ behave ಮಾಡುವುದು ಬೇಡ ಬನ್ನಿ. Democratic ಆಗಿ ನಾವು ಬಿಹೇವ್ ಮಾಡುತ್ತೇವೆ. ಸಂವಿಧಾನದಲ್ಲಿ, ಪ್ರಜಾ ತಂತ್ರದಲ್ಲಿ ನಂಬಿಕೆ ಇಟ್ಟುಕೊಂಡಿರುವವರು ನಾವು. ನಿಮಗೆ ಪ್ರಜಾ ತಂತ್ರದಲ್ಲಿಯೂ ನಂಬಿಕೆ ಇಲ್ಲ. ಸಂವಿಧಾನದ ಮೇಲೆಯೂ ನಂಬಿಕೆ ಇಲ್ಲ, ನಿಯಮಾವಳಿಗಳ ಮೇಲೆಯೂ ನಂಬಿಕೆ ಇಲ್ಲ. ಇವರು ಯಾವುದರಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ ನಮಗೆ ಗೊತ್ತಿಲ್ಲ.

ಅಧ್ಯಕ್ಷರು: ಮಾನ್ಯ ರೇವಣ್ಣರವರು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ನಿಯ 60ರ ಅಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ನಾವು ಎಲ್ಲಾ ಒಟ್ಟಿಗೆ ನಿಲುವಳಿ ಸೂಚನೆ ತಂದಿದ್ದೇವೆ. ನಮ್ಮ ಕಾನೂನು ಮಂತ್ರಿಗಳು ಕಾನೂನನ್ನು ಹೇಳುತ್ತಿದ್ದಾರೆ. ಅವರು ನಿಯಮ 60ರ ಅಡಿಯಲ್ಲಿ ರೀಸೆಂಟ್ ವಿಷಯ ಬರುವುದಿಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಕಾನೂನು ಮಂತ್ರಿಗಳಲ್ಲಿ ಮನವಿ ಮಾಡುವುದು ಇಷ್ಟೆ. ಕಳೆದ ಒಂದು ವಾರದಿಂದ ರಾಜ್ಯದ ಮುಖ್ಯಮಂತ್ರಿಗಳೇ ಪತ್ರಿಕೆಗಳಲ್ಲಿ ಹೇಳಿದ್ದಾರೆ. ವಿಧಾನಸಭೆಯಲ್ಲಿ ಬನ್ನಿ ಎಷ್ಟು ಇದೆಯೋ ಚರ್ಚೆ ಮಾಡೋಣ ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿರುವಾಗ ಕಾನೂನಿನ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳಬೇಕು, ನಿಯಮ ಏಕೆ ಬೇಕು? ನಿಯಮ ತೆಗೆಯಿರಿ. ರಾಜ್ಯದ 5 ಕೋಟಿ ಜನರ ಹಣ ಲೂಟಿ ಆಗುತ್ತಿದೆ. 5 ಕೋಟಿ ಜನರ ಹಣ ಲೂಟಿ ಆಗಿರುವುದನ್ನು ಚರ್ಚೆ ಮಾಡಿರುವುದಕ್ಕೆ ಏಕೆ ಹೆದರಬೇಕು? ನಿಯಮಾವಳಿ ಏತಕ್ಕೆ ಬೇಕು? ಕಾನೂನು ಮಂತ್ರಿಗಳು ನಿಯಮ 60ರ ಅಡಿಯಲ್ಲಿ ಚರ್ಚೆಗೆ ಬರುವುದಿಲ್ಲ ಎನ್ನುವುದಾದರೆ, ಕುಳಿತು ಚರ್ಚೆ ಮಾಡಿ ಯಾವುದು ಇದ್ದರೇನಂತೆ? ಮಾನ್ಯ ಮುಖ್ಯ ಮಂತ್ರಿಗಳೇ